ಇವರಿಗೆ,

ಘನ ಮುಖ್ಯಮಂತ್ರಿಗಳು

ಕರ್ನಾಟಕ ಸರಕಾರ.

ವಿಧಾನ ಸೌಧ. ಬೆಂಗಳೂರು.

ಮಾನ್ಯರೇ,

ಕೊವಿಡ್–19 ಪಿಡುಗು ಸೃಷ್ಟಿಸಿದ ಸನ್ನಿವೇಶವನ್ನು ಎದುರಿಸಲು ನೀವು ಮತ್ತು ನಿಮ್ಮ ಸಚಿವ ಸಂಪುಟವು ಅರಂಬಿಸಿರುವ ಕ್ರಮಗಳು ಪ್ರಶಂಸನೀಯ. ಅದರೆ ಈಗ ವಿಧಿಸಿರುವ ನಿರ್ಬಂಧವು ಸುದೀರ್ಘವಾಗಿದ್ದು ತಿಂಗಳು ಮೀರುವ ಸಾಧ್ಯತೆಯಿದ್ದು ಅದು ನಮ್ಮ ಬಹುಸಂಖ್ಯೆಯ ಜನರಿಗೆ ಅಪಾರ ಸಂಕಷ್ಟ ಸೃಷ್ಟಿಸುವುದಲ್ಲದೇ, ಅವರು ಹಸಿವಿನ ಸಂಕಷ್ಟಕ್ಕೀಡಾಗುವ ಸಾಧ್ಯತೆ ಇದೆ.. ಜನರಲ್ಲಿ ಸೃಷ್ಟಿಯಗುವ ಆಹಾರ, ಆದಾಯ ಮತ್ತು ವೈದ್ಯಕೀಯ ಅಭದ್ರತೆ ಕುರಿತಂತೆ ಸರಕಾರವು ತಕ್ಕುದಾದ ಮತ್ತು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ.

ಅತ್ಯಂತ ಸಂಕಷ್ಟಕ್ಕೀಡಾಗುವ ಜನಸ್ತೋಮಕ್ಕೆ ಕನಿಷ್ಠ ಸೌಲಭ್ಯದ ಜೀವನವನ್ನಾದರೂ ಕಲ್ಪಿಸುವುದನ್ನು ದೃಢಪಡಿಸಲು ಸರಕಾರವು ಘೋಷಣೆ ಮತ್ತು ಪೂರೈಕೆಯ ಕ್ರಮಗಳನ್ನು ಮಾಡಬೇಕಿದೆ.

ಸರಕಾರವು ಆಹಾರ, ಆದಾಯ ಮತ್ತು ವೈದ್ಯಕೀಯ ಭದ್ರತೆ ಕ್ರಮಗಳನ್ನು ಒದಗಿಸುವ ಕುರಿತು ನಾವು ಕೆಲವೊಂದು ಅಂಶಗಳನ್ನು ಈ ಟಿಪ್ಪಣಿಯಲ್ಲಿ ಲಗತ್ತಿಸಿದ್ದೇವೆ.

ಮಾರ್ಚ್ 26ರಂದು ಘೋಷಿಸಲಾದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ ಕೆಲವು ಕ್ರಮಗಳನ್ನು ಘೋಷಿಸಿದೆಯಾದರೂ, ಇಲ್ಲಿ ಘೋಷಿಸಲಾದ ವಿವಿಧ ಯೋಜನೆಗಳಿಂದ ಬಹಳಷ್ಟು ಜನರು ಹೊರಗುಳಿದಿರುವ ಸಾಧ್ಯತೆಗಳಿವೆ. ವಿವಿಧ ಯೋಜನೆಗಳಲ್ಲಿ ಈಗಾಗಲೇ ಒಳಗೊಂಡಿದ್ದರೂ ಎಲ್ಲಾ ಜನರಿಗೂ ಅಗತ್ಯ ಆಹಾರ ಮತ್ತು ಆವಶ್ಯಕ ವಸ್ತುಗಳ ಹಕ್ಕನ್ನು ಪರಿಗಣಿಸಿ ಪೂರೈಸಬೇಕಿದೆ.

ತಳಮಟ್ಟದಿಂದ ಮೇಲಕ್ಕೆ ನಿರ್ವಹಣಾ ವಿಧಾನವನ್ನು ಅನುಸರಿಸಬೇಕೆಂದು ನಾವು ಕೋರುತ್ತಿದ್ದೇವೆ. ಈ ಮೂಲಕ ಪ್ರತೀ ವಾರ್ಡ್/ಪ್ರತೀ ಹಳ್ಳಿಯ ಪ್ರತಿಯೊಬ್ಬನೂ ಒಳಗೊಳ್ಳುವುದು ಸಾಧ್ಯವಾಗಬೇಕು. ರಾಷ್ಟ್ರೀಯ ಪ್ರಾಕೃತಿಕ ವಿಪತ್ತು ಕಾಯಿದೆಯನ್ವಯ ಇದು ಜಿಲ್ಲಾ ಪ್ರಾಕೃತಿಕ ವಿಕೋಪ ನಿರ್ವಹಣಾ ಪ್ರಾಧಿಕಾರ ಮತ್ತು ರಾಜ್ಯ ನಿರ್ವಹಣಾ ಪ್ರಾಧಿಕಾರದ ಮುಲಕ ಅನುಷ್ಠಾನಗೊಳ್ಳಬೇಕು.

ಪ್ರತೀ ವಾರ್ಡ್ ಮತ್ತು ಹಳ್ಳಿಗಳಿಗೆ ಪ್ರತಿಯೊಬ್ಬನಿಗೂ ಆಹಾರ ಮತ್ತು ಆಶ್ರಯ ಒದಗಿಸುವಷ್ಟು ಸಂಪನ್ಮೂಲಗಳನ್ನು ಒದಗಿಸಬೇಕಾಗಿದೆ. ಜಿಲ್ಲಾ ಮಟ್ಟದಲ್ಲಿ ಒಟ್ಟಾರೆ ನಿರ್ವಹಣೆಯ ಜವಾಬ್ದಾರಿಯನ್ನು ಜಿಲ್ಲಾ ವಿಕೋಪ ನಿರ್ವಹಣಾ

ಪ್ರಾಧಿಕಾರಕ್ಕೆ ವಹಿಸಬೇಕು. ಈ ಪ್ರಾಧಿಕಾರದಲ್ಲಿ ನಾಗರಿಕ ಸಮಾಜದ ಪ್ರಾತಿನಿಧ್ಯ (ಅಗತ್ಯವಿದ್ದಲ್ಲಿ) ಇರುವಂತೆ ನೋಡಿಕೊಳ್ಳಬೇಕು. ರಾಜ್ಯ ಪ್ರಾಧಿಕಾರವು ಒಟ್ಟಾರೆ ಮಾರ್ಗದರ್ಶನವನ್ನು ನೀಡಬೇಕಿದೆ.

ನಮ್ಮ ಟಿಪ್ಪಣಿಯ ಅಂಶಗಳನ್ನು ಕುರಿತು ಮತ್ತು ಅದರ ಅನುಷ್ಠಾನದ ಬಗೆಯ ಬಗ್ಗೆ ನಿಮ್ಮ ಸ್ಪಂದನೆಯನ್ನು ನಿರೀಕ್ಷಿಸುತ್ತಿದ್ದೇವೆ.

ವಂದನೆಗಳೊಂದಿಗೆ